9

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ | : | 391 |
| ಉತ್ತರಿಸಬೇಕಾದ ದಿನಾಂಕ | : | 21.12.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಗ್ರಾಮೀಣ ಭಾಗದ ಪಶುಗಳಿಗೆ/ರಾಸುಗಳಿಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ಸಿಗದೆ ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು; | ರಾಜ್ಯದಲ್ಲಿ ಪ್ರಸ್ತುತ 4212 ವಿವಿಧ ಹಂತದ ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದೆ. ಇದರೊಂದಿಗೆ ಸಂಚಾರಿ ಪಶುಚಿಕಿತ್ಸಾಲಯಗಳ ಘಟಕಗಳ ಮುಖಾಂತರ ರೈತರ ರಾಸುಗಳಿಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. |
| ಆ | ಗ್ರಾಮೀಣ ಭಾಗದಲ್ಲಿರುವ ಪಶುಗಳಿಗೆ/ರಾಸುಗಳಿಗೆ ಆರೋಗ್ಯ ತಪಾಸಣೆ ಮಾಡಲು ಸರಿಯಾದ ಸಮಯದಲ್ಲಿ ಚಿಕಿತ್ಸೆ ನೀಡಲು, ಔಷಧಿ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ರಾಜ್ಯದ ಜಾನುವಾರುಗಳ ಚಿಕಿತ್ಸೆಗಾಗಿ 2022-23ನೇ ಸಾಲಿನಲ್ಲಿ ರಾಜ್ಯವಲಯದ ಲೆಕ್ಕ ಶೀರ್ಷಿಕೆಯಡಿ ರೂ.1262.00 ಲಕ್ಷಗಳ ಅನುದಾನ ಹಾಗೂ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಯಡಿ ರೂ.5439.03 ಲಕ್ಷಗಳ ಅನುದಾನದಲ್ಲಿ ಅತ್ಯವಶ್ಯಕವಾಗಿ ಬೇಕಾದ Antibiotics, Analgesics and Antipyretics, Antihistamines, Nutritional Supplements, Antiprotozoans, Anthelmentics, Fluids, Anticoagulants ಮತ್ತು ಇತರೆ ಅವಶ್ಯ ಔಷಧಿಗಳನ್ನು ಒದಗಿಸಲಾಗಿದೆ. |
| ಇ | ಪಶು ಚಿಕಿತ್ಸಾಲಯಗಳನ್ನು ಯಾವ ಆಧಾರದ ಮೇಲೆ ಸ್ಥಾಪಿಸಲಾಗುತ್ತಿದೆ; ಕೆಲವೊಂದು ಪ್ರದೇಶಗಳಲ್ಲಿ ಪಶು ಚಿಕಿತ್ಸಾಲಯಗಳು ಗ್ರಾಮಗಳಿಂದ ದೂರವಿರುವ ಪ್ರಕರಣಗಳಿದ್ದು ಹಾಗೂ ಪಶು ವೈದ್ಯರುಗಳು ಗ್ರಾಮಗಳಲ್ಲಿರುವ ಪಶುಗಳಿಗೆ/ರಾಸುಗಳಿಗೆ ಚಿಕಿತ್ಸೆ ನೀಡಲು ಭೇಟಿ ನೀಡದಿರುವ ಕುರಿತು ದೂರುಗಳಿದ್ದು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಪ್ರತಿ 5000 ಜಾನುವಾರು ಘಟಕಗಳಿಗೆ 01 ಪಶುವೈದ್ಯಕೀಯ ಸಂಸ್ಥೆ ಇರಬೇಕಾಗಿರುತ್ತದೆ. (ನೂತನ ಪಶು ಚಿಕಿತ್ಸಾಲಯ ತೆರೆಯಲು ವಿಧಿಸುವ 10 ಅಂಶಗಳ ಮಾನದಂಡದ ಮೇಲೆ ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗುತ್ತದೆ ಪಟ್ಟಿ **ಅನುಬಂಧ-1** ರಲ್ಲಿ ನೀಡಿದೆ)<br>ಪಶು ಚಿಕಿತ್ಸಾಲಯಗಳಿಗೆ ಗ್ರಾಮಗಳಿಂದ ದೂರವಿರುವ ಪ್ರಕರಣಗಳು ಯಾವುದು ಇರುವುದಿಲ್ಲ. ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವ ಸಂಸ್ಥೆಗಳಿಗೆ ಜಾನುವಾರುಗಳ ಚಿಕಿತ್ಸೆಗೆ ತೊಂದರೆ ಆಗದಂತೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಲಾಗಿರುತ್ತದೆ. ಅಲ್ಲದೇ ಪಶು ಚಿಕಿತ್ಸಾ ಸೌಲಭ್ಯ ದೊರೆಯದ ಸ್ಥಳಗಳಿಗೆ 176 ಸಂಚಾರಿ ಪಶು ಚಿಕಿತ್ಸಾಲಯಗಳ ಮೂಲಕ ಚಿಕಿತ್ಸೆ ಒದಗಿಸಲಾಗುತ್ತಿದೆ, ಇನ್ನೂ ಹೆಚ್ಚಿನ ಸೇವೆ ಒದಗಿಸಲು 290 ಹೊಸ ಸಂಚಾರಿ ಪಶು ಚಿಕಿತ್ಸಾ ವಾಹನ ಪಡೆಯಲಾಗಿದ್ದು, ಶೀಘ್ರದಲ್ಲಿ ಕಾರ್ಯಾರಂಭ ಮಾಡಲಿವೆ. |

ಇ-ಪಸಂಮೀ 283 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:391 ಕ್ಕೆ

| ಕ್ರ.ಸಂ | 10 ಅಂಶಗಳು |
|---|---|
| 1 | ಗ್ರಾಮಕ್ಕೆ ಅತಿ ಹತ್ತಿರವಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಅಥವಾ ಪಶು ಚಿಕಿತ್ಸಾಲಯ ಇರುವ ಊರು ಮತ್ತು ದೂರ |
| 2 | ಗ್ರಾಮದಿಂದ 8–10 ಕಿ.ಮೀ. ವ್ಯಾಸದಲ್ಲಿ ಬರುವ ಗ್ರಾಮಗಳ ಸಂಖ್ಯೆ. |
| 3 | 8–10.ಮೀ. ವ್ಯಾಸದಲ್ಲಿ ಬರುವ ಗ್ರಾಮಗಳ ಹೆಸರು ಹಾಗೂ ಗ್ರಾಮಗಳಲ್ಲಿರುವ ಜಾನುವಾರುಗಳ ಸಂಖ್ಯೆ |
| 4 | ಸಂಬಂಧಪಟ್ಟ ತಾಲ್ಲೂಕಿನಲ್ಲಿರುವ ಒಟ್ಟು ಪಶು ಚಿಕಿತ್ಸಾಲಯಗಳ ಮತ್ತು ಹಳ್ಳಿಗಳ ಸಂಖ್ಯೆ ಹಾಗೂ ತಾಲ್ಲೂಕಿನ ಜಾನುವಾರುಗಳ ಸಂಖ್ಯೆ |
| 5 | ಗ್ರಾಮದಲ್ಲಿ ಅತ್ಯವಶ್ಯಕವಾಗಿರುವ ಸೌಕರ್ಯಗಳ ಬಗ್ಗೆ ಮಾಹಿತಿ<br>ಅ) ಸಾರ್ವಜನಿಕ ಆಸ್ಪತ್ರೆ |
| | ಆ) ಸಾರಿಗೆ ಸೌಕರ್ಯ. |
| | ಇ) ಅಂಚೆ ಕಚೇರಿ. |
| | ಈ) ಶಾಲೆ ಮತ್ತು ಕಾಲೇಜಿನ ಸೌಕರ್ಯಗಳು ಈ ಗ್ರಾಮದಲ್ಲಿಲ್ಲದಿದ್ದರೆ ಗ್ರಾಮದಿಂದ ಎಷ್ಟು ದೂರದಲ್ಲಿ ಈ ಅನುಕೂಲತೆಗಳು ದೊರೆಯುತ್ತವೆ. |
| 6 | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಕಟ್ಟಡವನ್ನು ನಿಗದಿತ ಮಾದರಿಯಲ್ಲಿ ಕಟ್ಟಿಸಿ ಇಲಾಖೆಗೆ ಒಪ್ಪಿಸಿಕೊಡುವ ದಾನಿಗಳು ಇರುವರೇ? ಅಥವಾ ಗ್ರಾಮ ಪಂಚಾಯಿತಿಯವರೇ ಕಟ್ಟಿಸುತ್ತಾರೆಯೇ? |
| 7 | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಸಿಬ್ಬಂದಿಯವರಿಗೆ ಬೇಕಾಗುವ ವಸತಿ ಗೃಹಗಳನ್ನು ಕಟ್ಟಿಸುವ ಬಗ್ಗೆ ಪ್ರಮಾಣ ಪತ್ರ |
| 8 | ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವುದಕ್ಕೆ ಕನಿಷ್ಠ ಒಂದು ಎಕರೆ ನಿವೇಶನ, ಊರಿನ ಹೊರಗೆ ಸರಿಯಾದ ಜಾಗದಲ್ಲಿ ಕೊಡುವ ಬಗ್ಗೆ ಹಾಗೂ ರೂ.2500–00 ಗಳನ್ನು ವಂತಿಗೆಯಾಗಿ ಅನಾವರ್ತಕ ವೆಚ್ಚವಾಗಿ ಜಿಲ್ಲಾ ಪಂಚಾಯಿತಿಗೆ ಕಟ್ಟುವ ಬಗ್ಗೆ ಸಂಬಂಧಪಟ್ಟವರ ಒಪ್ಪಿಗೆ ಪ್ರಮಾಣ ಪತ್ರ. |
| 9 | ಪ್ರತಿ ವರ್ಷ ಬರುವ ಆವರ್ತಕ ವೆಚ್ಚವನ್ನು ಕಟ್ಟುವ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಪ್ರಮಾಣ ಪತ್ರ. |
| 10 | ಆಸ್ಪತ್ರೆಗೆ ಪ್ರತಿನಿತ್ಯ ಅವಶ್ಯಕವಾಗಿ ಬೇಕಾಗಿರುವ ನೀರಿನ ವ್ಯವಸ್ಥೆ ಮಾಡಲು ಆಸ್ಪತ್ರೆ ಆವರಣದಲ್ಲಿ ಒಂದು ಬೋರ್ ವೆಲ್ ಹಾಕಿಸಿಕೊಡುವ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಪ್ರಮಾಣ ಪತ್ರ. |